## ಕವಿತೆ



**ಶಶಿ ತರೀಕೆರೆ**

ಕಲೆ: ಜಬೀವುಲ್ಲಾ ಎಂ. ಅಸದ್

# ಅವ್ವನ ಟಿಕೇಟು

ಟಿಕೇಟು ಕೊಟ್ಟರೆ ಜಾಯಿಂಟು ವೀಲು
ಹತ್ತಲು ಗೇಟು ತೆಗೆಯುತ್ತಾನೆ ಅನಾಮಿಕ
ಟಿಕೇಟು ತೋರಿಸಿದರೆ ಸಾಕು
ಗುಮ್ಮನಂತಿರುವ ವಿಮಾನದ ಸೀಟು
ಖಾತ್ರಿಯಾಗುತ್ತದೆ ಒಂದು ಪ್ರವಾಸಕ್ಕೆ
ಟಿಕೇಟಿದ್ದರೆ ಬಸ್ಸಿನ ಕಂಡಕ್ಟರು ಎಲ್ಲಿಗೋ
ಕರೆದುಕೊಂಡು ಹೋಗಿ ನಿಲ್ಲಿಸುತ್ತಾನೆ ಸುಮ್ಮನೆ

ನಾನು ಟಿಕೇಟು ತೋರಿಸುತ್ತೇನೆ
ನನಗೊಮ್ಮೆ ಅವ್ವನ ಗರ್ಭಚೀಲದಲ್ಲಿ
ಬಿಟ್ಟುಬಿಡಲಿ ಸಾಕು
ನಾನು ಸಹ ಮತ್ತೆ ಮೊದಲಿನಿಂದ
ಅವ್ವನನ್ನು ಪ್ರೀತಿಸುತ್ತೇನೆ
ಅವಳಿಗೊಂದು ನರುಗಂಪು ಕಪ್ಪು ಚಹಾ
ಒಲೆಯೂದಿ ಕುದಿಸುತ್ತೇನೆ

ಅವಳ ಕೆಮ್ಮನ್ನು ಅನುವಾದಿಸುತ್ತೇನೆ
ಮೊಲೆ ಹಾಲು ಕುಡಿದ ನೀರಮಣೆಯ ಗೆಜ್ಜೆ ಕಟ್ಟುತ್ತೇನೆ
ನಿಸ್ತೇಜದ ಕಣ್ಣಿಗೆ ಆತ್ಮದ ಹಣತೆ ಎದುರಿಡುತ್ತೇನೆ
ಆಕೆ ಧಾವಂತದಲ್ಲಿ ಹಚ್ಚಿಕೊಂಡ ತೈಲಕ್ಕೆ
ನೆರೆತ ಬೈತಲೆಯ ದಾರಿ ತೋರುತ್ತೇನೆ
ಕಪ್ಪು ಕೆನ್ನೆಗಿಳಿಯುವ ಬೆವರಿಗೆ ಬೀಸಣಿಕೆಯಾಗುತ್ತೇನೆ
ಇನ್ನೂ ಅನೇಕ ಅನೇಕನಾಗಿ ಅವಳ ಕಾವಲಿಗಿರುತ್ತೇನೆ

ಅವ್ವ ಒಪ್ಪುತಾಳೆಯೇ
ನಾನು ಅವಳ ಸೆರಗಿಗೆ ಅಂಟಿಕೊಂಡು
ಹುಡುಗಾಟಿಕೆ ಮಾಡದೆ ಬೆನ್ನ ಹಿಂದಿನ
ಗಾಳಿಯಾಗುವುದಕ್ಕೆ

ಮೀಸೆ ಚಿಗುರುವ ಹುಡುಗ ನೀನು
ಎಂದು ಒಲ್ಲದ ಮನಸಿನಿಂದ ಕಳಿಸುತ್ತಾಳೆ
ಮರಿ ಕರಡಿಗೆ ಕಾಡು ಸುತ್ತಲೂ ಹೆದರಿಸಿ
ಕಳಿಸುವಂತೆ

ನನ್ನ ಬಳಿ ಗೆಳೆಯ, ಗೆಳತಿ, ಪ್ರೇಯಸಿ, ಹೆಂಡತಿ
ಮಕ್ಕಳೆಂಬ ಅನೇಕ ಟಿಕೇಟುಗಳಿದ್ದವು
ಎಲ್ಲವೂ ವ್ಯರ್ಥ ದಿಕ್ಕಿನ ಕಡೆಗೆ
ದೀಕ್ಷೆಗಾಗಿ ಒದ್ದಾಡುವ ಉಪಾರ್ಥದ ಕಡೆಗೆ
ಉಳಿದಿರುವುದು ಒಂದೇ ಅವ್ವನ ಟಿಕೇಟು

